ನಮ್ಮ ಮಾವನ ಮನೆಗೆ ಕರೆದುಕೊಂಡು ಹೋದೆವು. ನನ್ನ ಮಾವ ವಿಧಾನಸೌಧದಲ್ಲಿದ್ದ ಅವನ ಪೂರ್ವಾಪರಗಳನ್ನು ಯಾರೋ ತಿಳಿದವರ ಮೂಲಕ ಆಗಲೇ ವಿಚಾರಿಸಿಕೊಂಡಿದ್ದರು.

ಹುಡುಗ ಒಳ್ಳೆಯವನೆಂದು ತಿಳಿದ ಮೇಲೆ ಅವನಿಗೆ ಎಲ್ಲಾ ವಿಚಾರಗಳನ್ನು ನೇರವಾಗಿಯೇ ಹೇಳಿದೆವು. ಅವನು ನಮ್ಮ ಕುಟುಂಬದ ಬಗ್ಗೆ ಅಲ್ಪ ಸ್ವಲ್ಪ ತಿಳಿದಿರುವುದಾಗಿ ಹೇಳಿದ. ಅನಂತರ ವಿಷಯವನ್ನು ನನ್ನ ತಂದೆಗೆ ತಿಳಿಸಿ ಅವರು ಹುಡುಗನ ಮನೆಗೆ ಹೋಗಿ ಅವರ ತಂದೆ ತಾಯಿಯನ್ನು ಮಾತನಾಡಿಸಿ ಬಂದಿದ್ದರು. ಅಲ್ಲಿಗೆ ಸರೋಜಳ ಮದುವೆಯ ಒಂದು ಘಟ್ಟ ಮುಗಿದಿತ್ತು. ಹುಡುಗನಿಗೆ ಬೆಂಗಳೂರಿನಲ್ಲಿ ಒಂದು ಸಣ್ಣ ಮನೆ ಮಾಡಿ ಕೊಡುವುದಾಗಿ ಅಪ್ಪ ಹೇಳಿ ಬಂದಿದ್ದರು. ಅವನ ತಂದೆ ತಾಯಿ ನೆಂಟರಿಷ್ಟರು ನಮ್ಮ ಮನೆಗೆ ಬಂದು ಹುಡುಗಿಯನ್ನು ನೋಡಿ ಒಪ್ಪಿಕೊಂಡರು. ನಮಗೆ ಒಬ್ಬಳೇ ಹುಡುಗಿಯಾದ ಕಾರಣ ಅವರು ಕೇಳಿದ್ದೆಲ್ಲ ಕೊಟ್ಟು ಮದುವೆಯನ್ನು ನಮ್ಮ ಹಳ್ಳಿಯಲ್ಲೇ ಚೆನ್ನಾಗಿ ಮಾಡಿ ಮುಗಿಸಿದ್ದೆವು. ಇದೆಲ್ಲ ಕೇವಲ ನಾಲ್ಕು ತಿಂಗಳಲ್ಲಿ ನಡೆದುಹೋಗಿತ್ತು. ಸರೋಜ ಕೂಡ ನನ್ನ ಜೊತೆಗೆ ಬೆಂಗಳೂರು ಸೇರಿಕೊಂಡಿದ್ದಳು. ನನ್ನ ತಂದೆ ತಾಯಿ ಮತ್ತು ನನಗೆ, ಸರೋಜಳಿಗೆ ಒಳ್ಳೆ ಹುಡುಗ ಸಿಕ್ಕಿದ್ದಕ್ಕೆ ತುಂಬಾ ಸಂತೋಷ ಆಗಿತ್ತು. ಈ ಮದುವೆಗೆ ಪ್ರೊ.ಗುರುನಾಥ್, ಶಾರದಾ ಮ್ಯಾಡಮ್, ಸಾವಿತ್ರಿ ಕೂಡ ಬಂದಿದ್ದರು.

***

ಮದುವೆಯ ಸಂಭ್ರಮ; ಗಟ್ಟಿಮೇಳ..

ಒಂದು ವರ್ಷ ಮುಗಿಯುತ್ತಾ ಬಂದಿದ್ದು ನನ್ನ ಮಹಾ ಪ್ರಬಂಧ ಬರೆದು ಮುಗಿಸಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿಬಿಟ್ಟಿದ್ದೆ. ಕಳೆದ ಆರು ತಿಂಗಳು ರಾತ್ರಿ ಹಗಲೆನ್ನದೆ ನನ್ನ ಸಂಶೋಧನೆಯನ್ನು ಬರೆದು ಮುಗಿಸಿದ್ದೆ. ಪ್ರೊಫೆಸರ್ ಅವರೂ ದಿನಾ ಬೆಳಿಗ್ಗೆ ಎರಡು ಮೂರು ಗಂಟೆಗಳು ನನ್ನ ಜೊತೆಗೆ ಕುಳಿತುಕೊಂಡು ನನಗೆ ಗೈಡ್ ಮಾಡಿ ಎಲ್ಲವನ್ನೂ ಮುಗಿಸಲು ಕಾರಣರಾಗಿದ್ದರು. ಮಹಾಪ್ರಬಂಧ ಒಪ್ಪಿಸಿದ ಮೇಲೆ ನನ್ನ ಮನಸ್ಸು ಸಂಪೂರ್ಣವಾಗಿ ನಿರಾಳವಾಗಿತ್ತು. ನಮ್ಮ ಊರಿನಲ್ಲಿ ತಯಾರಿ ಏನೂ ಇಲ್ಲದಿದ್ದರೂ ಸಾವಿತ್ರಿ ಮನೆಯಲ್ಲಿ ಸಾಕಷ್ಟು ತಯಾರಿ ನಡೆಯುತ್ತಿತ್ತು. ನೋಡು ನೋಡುತ್ತಿದ್ದಂತೆ ಮದುವೆಗೆ ದಿನಗಳು ಹತ್ತಿರ ಬಂದೇಬಿಟ್ಟಿದ್ದವು.

ನಮ್ಮ ಊರಿನಿಂದ ನಾವೆಲ್ಲರೂ ಒಂದು ಖಾಸಗಿ ಬಸ್ ಮಾಡಿಕೊಂಡು ಸಾಯಂಕಾಲ ಛತ್ರಕ್ಕೆ ಬಂದಿದ್ದೆವು. ಬರುವುದಕ್ಕೆ ಮುಂಚೆ ನನ್ನನ್ನು ಮನೆ ಒಳಗೆ ಕೂರಿಸಿ ಎಲ್ಲಾ ಮಹಿಳೆಯರು ಮದುವೆ ಹಾಡುಗಳನ್ನು ಹಾಡುತ್ತ ಮೈಗೆ ಅರಿಶಿನ ಹಚ್ಚಿದರು. ಕೈಗೆ ಒಂದು ತ್ರಿಶೂಲದಂತಿದ್ದ ಬಾಕು ಕೊಟ್ಟಿದ್ದು ಅದರ ತುದಿಗೆ ಒಂದು ನಿಂಬೆಕಾಯಿಯನ್ನು ಚುಚ್ಚಿದ್ದರು. ತಲೆಗೆ ಬಿಳಿ ರುಮಾಲು ಸುತ್ತಿದ್ದರು. ಮದುವೆ ಮಂಟಪದಲ್ಲಿ ಎಲ್ಲಾ ರೀತಿಯ ಕೆಲಸ ಕಾರ್ಯಗಳು, ಮದುವೆ ಪದ್ಧತಿಗಳು ಮಧ್ಯರಾತ್ರಿಯವರೆಗೂ ನಡೆದವು. ಊಟ ಮಾಡಿ ಮಲಗಲು ಶುರು ಮಾಡಿದ್ದೇ ತಡ ಮತ್ತೆ ಎಲ್ಲರನ್ನು ಎಬ್ಬಿಸಿ ಮತ್ತೆ ಬೆಳಗಿನ ಮುಹೂರ್ತಕ್ಕೆ ತಯಾರಿ ನಡೆಸಲಾಯಿತು. ನನ್ನನ್ನು ಎಬ್ಬಿಸಿ ತಣ್ಣೀರಿನಲ್ಲೇ ಸ್ನಾನ ಮಾಡಿಸಿ ಮುಹೂರ್ತಕ್ಕೆ ತಂದಿದ್ದ ಬಿಳಿ ಶರ್ಟ್, ಬಿಳಿ ಪಂಚೆ, ರುಮಾಲು ಎಲ್ಲವನ್ನು ಧರಿಸಿ ಬಾಸಿಂಗ ಕಟ್ಟಿ ವಿಭೂತಿ ಬಳಿದು ನನ್ನನ್ನು ತಯಾರು ಮಾಡಿ ಕುರ್ಚಿ ಮೇಲೆ ಕೂರಿಸಿಬಿಟ್ಟರು. ಇನ್ನೊಂದು ಕೋಣೆಯಲ್ಲಿ ಸಾವಿತ್ರಿಯನ್ನು ತಯಾರು ಮಾಡಿಸುತ್ತಿದ್ದರು. ಎಲ್ಲರೂ ಸ್ನಾನ ಮಾಡುತ್ತ ಬಟ್ಟೆ ಬದಲಿಸಿಕೊಳ್ಳುತ್ತ ಛತ್ರದಲ್ಲಿ ಒಂದೇ ಗಡಿಬಿಡಿ ನಡೆಯುತ್ತಿತ್ತು. ಒಂದೇ ಗಲಿಬಿಲಿ. ವಾದ್ಯಗಾರರು ವಾದ್ಯಗಳನ್ನು ತಯಾರಿ ಮಾಡಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಮದುವೆ ಮನೆಯಲ್ಲಿ ಏನೆಲ್ಲ ನಡೆಯುತ್ತದೋ ಅದೆಲ್ಲ ಈಗ ನಡೆಯುತ್ತಿತ್ತು. ಆಗಲೇ ಬೆಳಕು ಮೂಡಿ ಸುಮಾರು ಹೊತ್ತಾಗಿ ಮುಹೂರ್ತಕ್ಕೆ ಎಲ್ಲವನ್ನು ಅಣಿಮಾಡಿಕೊಂಡ ಜೋಯಿಸರು ಒಂದು ಕಡೆ ನನ್ನನ್ನು, ಇನ್ನೊಂದು ಕಡೆ ಸಾವಿತ್ರಿಯನ್ನು ಕರೆದು ಕೂರಿಸಿಕೊಂಡು ಇಬ್ಬರ ನಡುವೆ ಪಂಚೆ ಅಡ್ಡ ಇಟ್ಟು ಮಂತ್ರಗಳನ್ನು ಪಠಿಸುತ್ತಿದ್ದರು.

ಹೊಸ ಬಟ್ಟೆಗಳನ್ನು ಧರಿಸಿದ್ದ ಮಹಿಳೆಯರು, ಮಕ್ಕಳು, ನನ್ನ ಅತ್ತೆಮಾವ, ತಂದೆ ತಾಯಿ, ದೊಡ್ಡಪ್ಪ ದೊಡ್ಡಮ್ಮ, ಸಂಬಂಧಿಗಳು, ನೆಂಟರು, ಗೆಳೆಯರು ನನ್ನ ಸುತ್ತಲೂ, ಸಾವಿತ್ರಿಯ ಸುತ್ತಲೂ ಅವರ ಕುಟುಂಬದವರು ನಿಂತಿದ್ದಾರೆ. ಇನ್ನೇನು ಮುಹೂರ್ತದ ಸಮಯ ಹತ್ತಿರ ಬಂದಂತೆ ಜೋಯಿಸರು ಇಬ್ಬರು ಹುಡುಗಿಯರನ್ನು ಕರೆದು ಅವರ ಕೈಗೆ ಅರಿಶಿನ ಬೆರೆತ ಅಕ್ಷತೆ ಕಾಳನ್ನು ಕೊಟ್ಟು ಎಲ್ಲರಿಗೂ ಕೊಡುವಂತೆ ಹೇಳಿದರು. ಅವರು ಎಲ್ಲರಿಗೂ ಕೊಡುತ್ತಿದ್ದಂತೆ ಇನ್ನೊಬ್ಬ ಜೋಯಿಸರು ಒಂದು ತಟ್ಟೆಯಲ್ಲಿ ತೆಂಗಿನ ಕಾಯಿ, ಎಲೆ ಅಡಿಕೆ ಪೂಜಾ ಸಾಮಾಗ್ರಿಗಳನ್ನು ಇಟ್ಟುಕೊಂಡು ಅದರಲ್ಲಿಯೇ ಮಾಂಗಲ್ಯ ಸರವನ್ನು ಇಟ್ಟು ಎಲ್ಲರಿಗೂ ತೋರಿಸಿಕೊಂಡು ಬಂದರು. ಅಡ್ಡ ಹಿಡಿದುಕೊಂಡಿದ್ದ ಬಿಳಿ ಪಂಚೆಯ ಆ ಕಡೆ ಸಾವಿತ್ರಿ, ಈ ಕಡೆಗೆ ನಾನು ಹಾಗೇ ಕುಳಿತಿದ್ದೇವೆ.

ಕ್ಯಾಮರಾಮನ್ ಹಳೆ ಶೈಲಿಯ ಕಪ್ಪು ಬಿಳುಪು ಫೋಟೋಗಳನ್ನು ಹಿಡಿಯುತ್ತಿದ್ದಾನೆ. ಕೊನೆಗೆ `ಗಟ್ಟಿಮೇಳ' ಹೊಡೆಯಲು ಹೇಳಿ ಪಂಚೆ ಸರಿಸಿ ತಾಳಿಯನ್ನು ಕಟ್ಟುವಂತೆ ನನಗೆ ಆಜ್ಞೆಯಾಯಿತು. ಆ ಕ್ಷಣದಲ್ಲಿ ಬಹುಶಃ ನಾನು ನಾನಾಗಿರಲಿಲ್ಲ. ಅಂತೂ ತಾಳಿ ಕಟ್ಟಿ ಸಾವಿತ್ರಿಯ ಮುಖವನ್ನು ನೋಡಿದೆ. ಸಾವಿತ್ರಿಯ ಮುಖದಲ್ಲೂ ಏನೋ ಒಂದು ರೀತಿಯ ಬದಲಾವಣೆ ಕಾಣಿಸಿಕೊಂಡಿತು. ಸುತ್ತಲಿದ್ದವರೆಲ್ಲ ಅಕ್ಷತೆ ಕಾಳನ್ನು ಎಲ್ಲಾ ಕಡೆಯಿಂದಲೂ ಒಂದೇ ಸಮನೆ ಎಸೆದರು. ಅಲ್ಲಿಗೆ ಮದುವೆ ಮುಗಿದು ಹೋಗಿತ್ತು. ಸಾವಿತ್ರಿಯ ಪಕ್ಕದಲ್ಲಿ ನಿಂತಿದ್ದ ಅವಳ ತಂದೆತಾಯಿ ಇಬ್ಬರೂ ಬಿಕ್ಕಿಬಿಕ್ಕಿ ಅಳುತ್ತಿದ್ದರು. ಅದೇ ಸಾಯಂಕಾಲ ಆರತಕ್ಷತೆಯೂ ಜೋರಾಗಿ ನಡೆಯಿತು. ಮುಹೂರ್ತ ಆದ ಮೇಲೆ ಮತ್ತು ಸಾಯಂಕಾಲ ಆರತಕ್ಷತೆ ಮುಗಿದ ಮೇಲೆ ಭರ್ಜರಿ ಅಡುಗೆಗಳನ್ನು ಏರ್ಪಡಿಸಲಾಯಿತು. ಅತ್ತೆ ಮಾವ ಹೇಳಿದಂತೆ ಎಲ್ಲವನ್ನು ಮಾಡಿ ಮದುವೆ ಮುಗಿಸಿದ್ದರು. ನನಗೆ ಬೇಡವೆಂದರೂ ಒಂದು ಬಜಾಜ್ ಸ್ಕೂಟರ್ ಬೇರೆ ಕೊಡಿಸಿದ್ದರು. ಪ್ರಸ್ತುತ ಮಾವನ ಮನೆಯೇ ನನ್ನ ಬೆಂಗಳೂರಿನ ವಾಸವಾಗಿತ್ತು.

***

ಮದುವೆಯಾದ ಮೇಲೆ ಬೆಂಗಳೂರಿನಲ್ಲಿದ್ದ ಮಾವನ ಮನೆಯ ನೆಂಟರು, ಗೆಳೆಯರು, ನಮ್ಮ ಊರಿನಲ್ಲಿ ಮತ್ತು ನನ್ನ ಸೋದರತ್ತೆಯ ಊರಿನವರು ನನ್ನನ್ನು ಮತ್ತು ಸಾವಿತ್ರಿಯನ್ನು ಕರೆದು ವಿವಿಧ ರೀತಿಯ ಭಕ್ಷ್ಯಗಳನ್ನು ಮಾಡಿ ಹಾಕಿ ತಿನ್ನಿಸಿ ಉಡುಗೊರೆಗಳನ್ನು ಕೊಟ್ಟರು. ಅದಕ್ಕೂ ಮುಂಚೆ ನಮ್ಮೂರಿನಲ್ಲಿ ಪ್ರತ್ಯೇಕವಾಗಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಊರಿನವರಿಗೆಲ್ಲ ಊಟ ಹಾಕಲಾಯಿತು. ಎಲ್ಲೆಲ್ಲೂ ಕುರಿ, ಮೇಕೆ, ಕೋಳಿ, ಮೀನಿನ ಸಮಾರಾಧನೆ ನಡೆದಿತ್ತು. ಸಣಕಲಾಗಿದ್ದ ನಮ್ಮಿಬ್ಬರ ಮುಖಗಳಲ್ಲಿ ಎಣ್ಣೆ ಉಕ್ಕಿ ಹರಿಯತೊಡಗಿತು. ಯಾರ ಮನೆಗೆ ಹೋದರೂ 'ತಿನ್ನಿ ತಿನ್ನಿ' ಎಂದು ಒಂದೇ ಸಮನೆ ನಮಗೆ ಪ್ರೀತಿಯಿಂದ ಮಾಂಸಾಹಾರ, ಸಸ್ಯಾಹಾರದ ಅಡುಗೆ ಮತ್ತು ಸಿಹಿತಿಂಡಿಗಳನ್ನು ಮಾಡಿ ತಿನ್ನಿಸುತ್ತಿದ್ದರು. ಹತ್ತು ದಿನಗಳಲ್ಲೇ ಸಾಕಪ್ಪ ಸಾಕು ಎನ್ನುವಂತಾಗಿಬಿಟ್ಟಿತು. ಕಾಲೇಜಿಗೆ ಒಂದು ತಿಂಗಳು ರಜೆ ಹಾಕಿ ಓಡಾಡುತ್ತಿದ್ದೆ. ನನ್ನ ಸೋದರತ್ತೆ ಮಾವನ ಮನೆಯವರು ವಿಶೇಷವಾಗಿ ಕರೆದು ಊಟ ಹಾಕಿದ್ದರು. ಸಾವಿತ್ರಿಯ ತಂದೆ




## ಮಳೆ

ಒಂದೇ ಸಮನೆ
ಬಾನಿನಿಂದ ಬೀಳುವ
ಶ್ರಾವಣದ ಮಳೆಗೆ
ಭುವಿಯಲ್ಲಿ
ಕೊಡೆ ಬಿಚ್ಚಿ ನಿಂತಿದ್ದವು
'ಅಣಬೆಗಳು'!

★ ವೀಣಾ ರವಿ ಪೈ